ರತ್ನಾ ಅಶೋಕ, ಗೊರವರ

ಮಾತು ಬೆಳ್ಳಿ, ಮೌನ ಬಂಗಾರ. ಎರಡೂ ಇಲ್ಲದಿದ್ದರೆ?




ಒಡಕು ಬಾಯಿಗಳಿಂದ ಹಿತ್ತಾಳೆ ಕಿವಿಗಳಿಗೆ ಬ್ರೇಕಿಂಗ್ ನ್ಯೂಸ್!

ಪಾರ್ವತಿ ರಮೇಶ್, ಮೈಸೂರು

*ಇಲ್ಲೊಬ್ಬಳು ರಸ್ತೆಯಲ್ಲಿ ಬೈಕ್‌ನಲ್ಲಿ ಹೋಗುವಾಲೇ ಗಂಡನಿಗೆ ತಿಂಡಿ ತಿನ್ನಿಸುತ್ತಾ ಇಲ್ಲಾ, ಅದೇನು ಪ್ರೇಮದ ಹುಚ್ಚೋ ಅಥವಾ ಸಮಯದ ಅಭಾವವೋ?*

ಡಾಗ್‌ಬಿಸ್ಕತ್ತನ್ನು ನಾಯಿಯೇ ತಿನ್ನಬೇಕು, ಗಂಡನಿಗೆ ಮಾಡಿದ ತಿಂಡಿಯನ್ನು ಗಂಡನೇ ತಿನ್ನಬೇಕೆಂಬುದು ಅವಳ ರೂಲ್ಸ್ ಅಂತೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ನಮ್ಮ ರಾಜಕಾರಣಿಗಳ ಸಂಪತ್ತು ಅನಂತಪದ್ಮನಾಭನನ್ನೂ ಮೀರಿಸುವಂತಿದೆಯಲ್ಲಾ ರಾಮ್‌ಜೀ?*

ಬಡಪಾಯಿ ದೇವನಿಗೆ ಸಂಪತ್ತನ್ನು ಪೇರಿಸಿಕೊಳ್ಳಲು ನೆಲಮಾಳಿಗೆಯಷ್ಟೇ ಜಾಗ. ಇವರಿಗಾದರೆ ವಸುಧೈವ ತಿಜೋರಿಯಂ!

ಪಿ.ಜಿ.ರಾಘವೇಂದ್ರ, ಮೈಸೂರು

*ಭರತ ಶ್ರೀರಾಮನ ಪಾದುಕೆಯನ್ನು ತಂದಿದ್ದರಿಂದ ಶ್ರೀರಾಮನಿಗೆ ಕಾಡಿನಲ್ಲಿ ಓಡಾಡಲು ತೊಂದರೆ ಆಗಲಿಲ್ಲವೆ?*

ಖಂಡಿತ ಇಲ್ಲ. ಕಾಲು ತಾಕಿದರೆ ಬಂಡೆಯೇ ಮೃದುವಾದ ಹೆಣ್ಣಾಗುವಾಗ ನೋವೇಕೆ ಆದೀತು ಬಿಡಿ!

ಆರ್.ವಿಜಯಲಕ್ಷ್ಮಿ, ಕೊಳ್ಳೇಗಾಲ

*ಮಕ್ಕಳು ಕಾಲು ಎಳೆಯುವುದಕ್ಕೂ, ದೊಡ್ಡವರು ಕಾಲು ಎಳೆಯುವುದಕ್ಕೂ ಇರುವ ವ್ಯತ್ಯಾಸವೇನು?*




ಒಂದು ಪ್ರಮೋದ, ಇನ್ನೊಂದು ಪ್ರಮಾದ!

ಲ್ಯಾಂಡ್‌ಬ್ಯಾಂಕ್ ಡಿ, ಚಂದ್ರಕುಮಾರ್, ಬೆಂಗಳೂರು

*ಸುಖವನ್ನು ಅರಸುವವರಿಗಾಗಿ ನಿಮ್ಮ ಸಲಹೆ?*

ಶ್ರಮವೆಂಬ ಮರ ಬೆಳೆಸಿ, ತೃಪ್ತಿಯೆಂಬ ಫಲ ಪಡೆದರೆ ಎಲ್ಲೆಲ್ಲೂ ಸುಖದ ನೆರಳೋ ನೆರಳು!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಭಕ್ತಿಯ ಮಾರ್ಗ ಯಾವುದು?*

ಎರಡು ದಾರಿಗಳಿವೆ; ಒಂದು ಭಯದ ಇಳಿಜಾರಿನಲ್ಲಿ ಸಾಗಿ ಮೂಢನಂಬಿಕೆಯ ಗುಡ್ಡ ಹತ್ತುವುದು; ಮತ್ತೊಂದು ಪ್ರೀತಿಯ ರಸ್ತೆಯಲ್ಲಿ ಸಾಗಿ ಬಲಕ್ಕೆ ತಿರುಗಿ ಆರಾಧನಾ ಪಥದಲ್ಲಿ ಚಲಿಸುವುದು!

ಎಂ.ಎಸ್. ಸೋಮಶೇಖರ್, ಮೈಸೂರು

*ನಾವು ಕೇಳುವ ಎಲ್ಲಾ ರೀತಿಯ ಪ್ರಶ್ನೆಗಳಿಗೆ ಅರ್ಥಪೂರ್ಣವಾಗಿ, ಹಾಸ್ಯಲೇಪ ಹಚ್ಚಿ, ಸಮಂಜಸವಾದ ಉತ್ತರಗಳನ್ನು ನೀಡುವ ಮಹಾನ್ ವ್ಯಕ್ತಿಗೆ ನೀವು ಯಾವ ಬಿರುದನ್ನು ನೀಡುತ್ತೀರಿ?*

ಹಾಗೆಲ್ಲಾ ಹಾಸ್ಯ ಬರೆಯುವವರಿಗೆ ಬಿರುದನ್ನು ಕೊಡಲು ಆಗುವುದಿಲ್ಲ, ಬೇಕಿದ್ದರೆ ಕಡೆಯಲ್ಲಿ ಬಿದಿರನ್ನು ಕೊಡುತ್ತೇವೆ!

ಪಿ.ಎಸ್.ಶ್ರೀವತ್ಸ, ಬೆಂಗಳೂರು

*ಕೆಲವು ವೇಳೆ ಏನು ಪ್ರಶ್ನೆ ಕೇಳಬೇಕೆಂಬುದೇ ಹೊಳೆಯದಿರಲು ಕಾರಣ?*

ಎಲ್ಲಕ್ಕಿಂತ ದೊಡ್ಡ ಪ್ರಶ್ನೆಯಾದ ಹೆಂಡತಿ ಎದುರಿಗೆ ನಿಂತಿದ್ದರೆ ಕೆಲವೊಮ್ಮೆ ಹಾಗಾಗುತ್ತದೆ!

ಡಿ.ಎಲ್. ಶ್ವೇತಾ, ಚನ್ನಗಿರಿ

*ಡಿ.ಡಿ. ಮತ್ತು ಚೆಕ್‌ಗೆ ಇರುವ ವ್ಯತ್ಯಾಸವನ್ನು ಮಾನವ ಸಂಬಂಧದ ಉದಾಹರಣೆಯೊಂದಿಗೆ ತಿಳಿಸಿ?*

ಚೆಕ್ ಲವ್ ಅಫೇರ್ ಇದ್ದಂತೆ, ಯಾವಾಗ ಬೇಕಾದರೂ ಬೌನ್ಸ್ ಆಗಬಹುದು; ಡಿ.ಡಿ. ಮದುವೆಯಿದ್ದಂತೆ, ಮಾಡಿಸುವಾಗಲೂ ಖರ್ಚು, ಕ್ಯಾನ್ಸಲ್ ಮಾಡಿಸುವಾಗಲೂ ಖರ್ಚು!

ಮಹಾವೀರ ಕಾಸರ, ಶಿವಮೊಗ್ಗ

*ಪ್ರತಿಯೊಂದು ಪ್ರಾಣಿಯಲ್ಲಿರುವ ಒಂದೊಂದು ಒಳ್ಳೆಯ ಗುಣವನ್ನು ಅಳವಡಿಸಿಕೊಂಡರೆ ಮನುಷ್ಯ ಹೇಗಿರುತ್ತಾನೆ?*

ಆಗಲ್ಲ ಬಿಡಿ; ಕಾಗೆಯಂತೆ ಊಟ ಹಂಚಿಕೊಂಡರೆ ತಾನೇ ಹಸಿದಿರಬೇಕಾಗುತ್ತದೆ ಅಥವಾ ದೊಡ್ಡ ಸಾಲಗಾರನಾಗಬೇಕಾಗುತ್ತದೆ!

ಗೀತಾ, ನಾಗರಭಾವಿ

*ಮಲಗುವ ಮುನ್ನ ನನ್ನ ಪಕ್ಕದಲ್ಲಿದ್ದ ನನ್ನವರು ಬೆಳಗಾದ ಕೂಡಲೆ ತಾಯಿಯ ಪಕ್ಷ ವಹಿಸುವುದೇಕೆ ಅಣ್ಣಯ್ಯಾ?*

ತಿಳಿಯಿತು. ಅವರದು ಎಲ್ಲೆಲ್ಲಿ ಏನೇನು ಲಾಭ ಸಿಗುವುದೋ ಪಡೆದು, ನಂತರ ಧಿಂಗನೆ ನೆಗೆಯುವ ರೆಸಾರ್ಟ್ ಮಂತ್ರಿಯ ಬುದ್ಧಿ!

## ಬಹುಮಾನಿತ ಪ್ರಶ್ನೆ

ಪೇಂಟರ್ ಪಾಪು, ಸಂತೇಮರಹಳ್ಳಿ

*ಪ್ರಳಯ ಆಗಿ ನಾವೆಲ್ಲರೂ ಸತ್ತು ಹೋದರೆ ನಮ್ಮೆಲ್ಲರಿಗೂ ತಿಥಿ ಮಾಡುವವರು ಯಾರು?*

ಟಿವಿಯಲ್ಲಿ ಬರುವ ಬ್ರಹ್ಮಾಂಡದಂತಹ ಪಿಂಡಪ್ರಧಾನ ಜೋತಿಷಿ ಎಲ್ಲರ ಶ್ರಾದ್ಧವನ್ನೂ ಆಗಲೇ ಮಾಡಿ ಆಗಿದೆ. ನೀವು ನಿಶ್ಚಿಂತರಾಗಿ ಸಾಯಬಹುದು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಹೆಣ್ಣು ನೈಂಟಿ ಹಾಕಿ, ಗಂಡು ನೈಟಿ ಹಾಕಿದರೆ?*

ಮಕ್ಕಳಿಗೆ ಟಿಕ್‌ಟ್ವೆಂಟಿಯೇ ಗತಿ!

ದೀಪಾ ವಿ. ಮಹಾಲೆ, ಸಾಂಬ್ರಾಣಿ

*ಹೆಣ್ಣು ಭ್ರೂಣಗಳೇಕೆ ಗರ್ಭದಲ್ಲೇ ಕಾಣೆಯಾಗುತ್ತವೆ?*

ಹುಟ್ಟಿಸಿದ (ಪತಿ) ದೇವರಿಗೆ ಹುಲ್ಲು ಮೇಯ್ಸಕ್ಕೆ ತಾಕತ್ತಿಲ್ದೇ ಇರೋದ್ರಿಂದ!

ಕಲಾವಿದ ಸೀನು, ಚಿತ್ರದುರ್ಗ

*ಹುಡುಗಿಯರು ಕನ್ನಡಿ ಇರುವ ಪರ್ಸ್‌ಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ; ಯಾಕಿರಬಹುದು?*



ಹಿಂದಿನಿಂದ ಕದ್ದು ನೋಡುವವರನ್ನು ಕನ್ನಡಿಯಲ್ಲಿ ಕಂಡುಹಿಡಿಯಬಹುದೆಂದು!

ಎ.ಕೆ. ಪಟ್ಟಾಭಿ, ಬೆಂಗಳೂರು

*ಅಲ್ಪರ ಸಂಗ ಅಭಿಮಾನ ಭಂಗ, ರಾಜಕಾರಣಿಗಳ ಸಂಘ?*

ದೇಶದ ಮಾನಭಂಗ!

ಎನ್.ಎಸ್. ಆನಂದ್, ಕತ್ತರಗುಪ್ಪ

*ಮೋಕ್ಷ ಪಡೆಯಲು ಮುಂದಾದ ನನ್ನ ಗೆಳೆಯನಿಗೆ ಸಿಕ್ಕಿದ್ದು ಕಪಾಳಮೋಕ್ಷ; ಇದ್ಯಾವ ನ್ಯಾಯ ಸ್ವಾಮಿ?*

ಭಾಗ್ಯದ ಲಕ್ಷ್ಮಿ ಬಾರಮ್ಮ, ನಮ್ಮಮ್ಮ ಶ್ರೀ... ಬದಲು ಎದುರುಮನೆ ಲಕ್ಷ್ಮಿ ಬಾರಮ್ಮ, ನಮ್ಮಮ್ಮ ಇಲ್ಲ... ಹಾಡಿದನಂತೇ...!

ಚಿಕ್ಕೋಬನಹಳ್ಳಿ ಚಾಂದ್‌ಬಾಷ, ತಳಕು

*ನ್ಯಾಯ ಎಲ್ಲಿದೆ?*

ಎಲ್ಲೆಲ್ಲೂ ಇದೆ. ಹುಟ್ಟಿ 18 ವರ್ಷಕ್ಕೂ ಹೆಚ್ಚಾಗಿರುವುದರಿಂದ ಸರ್ಟಿಫಿಕೇಟ್ ಪಡೆದು ಅನ್ಯಾಯ ಎಂದಾಗಿದೆಯಷ್ಟೆ!

■ ರಾಮ್